# ಕರಿಯ ಟಿಕ್ಕು ನೀಲಿಯಾಗಿಲ್ಲ



ನಾಗರಾಜ ವಸ್ತಾರೆ

ಎಲ್ಲ ಸರಿಹೋಗಿದ್ದಲ್ಲಿ ನಾನಿವನ ಹೆಂಡತಿಯಾಗಿರಬೇಕಿತ್ತು. ಇವನ ಮನೆವಾರ್ತೆ ನೋಡಿಕೊಳ್ಳುವ ಬೇಗಂ ಮತ್ತು ಇವನ ಮಕ್ಕಳಿಗೆ ಅಮ್ಮಿ. ಫಾತಿಮಾ ಅಂತಲೋ ಅಖ್ತರುನ್ನೀಸಾ ಎಂದೋ ಮರುಹೆಸರು ತಾಳಿ ನಮಾಜು ಮಾಡಬೇಕಿತ್ತು; ಮತ್ತು ರಮ್ಜಾನಿನಲ್ಲಿ ರೋಜಾ. ಆದರೆ ಏನೂ ಸರಿಯೇ ಹೋಗಲಿಲ್ಲವೆ?! ನಾನಂದುಕೊಂಡಂತೆ ಅವನಂದುಕೊಳ್ಳಲಿಲ್ಲವಾಗಿ, ಇಂದುಕಾಂತಿ ಅಂತಲೇ ಹಳೆಯ ಹೆಸರೊಳಗೆ ಮಿಕ್ಕುಹೋದೆ. ಅಥವಾ ಇವನು ಈಗಲೂ ಕರೆಯುವ ಹಾಗೆ ಇಂದ್!

ಚಿಕ್ಕಂದಿನ ಫ್ರೆಂಡ್ಸು ನಾವು. ಎಂಟು ಒಂಬತ್ತು ಹತ್ತು ಒಟ್ಟೇ ಕಲಿತಿದ್ದು. ಹುಚ್ಚು ಹುಡುಗಾಟಿಕೆ ತೀರಿ ಮತ್ತೂ ಹೆಚ್ಚು ಹೆಚ್ಚು ಹುಚ್ಚಾಟಿಕೆಯ ಹೆಣ್ಣಾಗಿ ನಾನೂ, ಗಂಡಸಾಗಿ ಇವನೂ ಮಾರ್ಪಡುತ್ತಿದ್ದ ದಿನಗಳಲ್ಲಿ, ನನಗೆ ಇವನ ಮೇಲೆ ಇನ್ನಿಲ್ಲದ ಮೋಹವುಂಟಾಗಿತ್ತು. ಒನ್ನಮೂನೆ ಕ್ರಶ್ಶು. ಅರುಹಲ್ಪಡದ ವಾಂಛೆ.

ಪಿಯುಸಿ ಮುಗಿಸಿದ್ದೇ ನಾನೆಲ್ಲೋ ಇವನೆಲ್ಲೋ ಅಂತಾಗಿಬಿಟ್ಟೆವು. ದೆಹಲಿಯ 'ಹೈಸೊಸೈಟಿ' ಮುಸ್ಲಿಂ ಇವನು. ಭಾರೀ ಲಿಬರಲ್ಲು. ಗ್ರ್ಯಾಜುಏಶನಿಗೆಂದು ಜರ್ಮನಿ ಹೊಕ್ಕು ಬಳಿಕ ಯೂಎಸ್ಸಿನಲ್ಲಿ ನೆಲೆಸಿದ. ನ್ಯೂಯಾರ್ಕ್ ಸ್ಟಾಕ್ ಎಕ್ಸ್‌ಚೇಂಜಿನಲ್ಲಿ ದೊಡ್ಡ ಹುದ್ದೆಯಾಯಿತು.

ನಾನು ಮದುವೆಯಾಗಿ ಬೆಂಗಳೂರು ಸೇರಿದೆ. 'ಮುದ್ರಾ' ಮೀಡಿಯಾದಲ್ಲಿ ದೊಡ್ಡ ಕೆಲಸ. ನನ್ನ ಗಂಡನೋ ಮದುವೆಯಲ್ಲಿ